MARCH 26, 2026

# AKASHAVANI - DHARWAD

# PRADESH SAMACHARA (KANNADA) 12.00 P.M.

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

**<><><>**

ಭಾರತೀಯ ವಿಶ್ವವಿದ್ಯಾಲಯಗಳ ಒಕ್ಕೂಟ, ಇಂದಿನಿಂದ ಏಪ್ರಿಲ್ 4ರ ವರೆಗೆ, ದಾವಣಗೆರೆ ವಿಶ್ವವಿದ್ಯಾಲಯದಲ್ಲಿ, ದಕ್ಷಿಣ ವಲಯ ಅಂತರ್ ವಿಶ್ವವಿದ್ಯಾಲಯಗಳ, ಪುರು ' ಮತ್ತು ಮಹಿಳಾ, ಖೋ-ಖೋ ಪಂದ್ಯಾವಳಿ ಆಯೋಜಿಸಿದೆ. ಇಂದು ಸಂಜೆ 5 ಗಂಟೆಗೆ, ಖೋ ಖೋ ಕ್ರೀಡಾಕೂಟ ಉದ್ಘಾಟನೆಯಾಗಲಿದೆ. ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು, ಪುದುಚೇರಿ ಹಾಗೂ ಕೇರಳ ರಾಜ್ಯದಿಂದ, ಒಟ್ಟು 178 ತಂಡಗಳು ಹಾಗೂ 3 ಸಾವಿರಕ್ಕೂ ಹೆಚ್ಚು ಕ್ರೀಡಾಪಟುಗಳು, ಭಾಗವಹಿಸಲಿದ್ದಾರೆ.

<><><>

ದಾವಣಗೆರೆ ವಿಶ್ವವಿದ್ಯಾಲಯದ, ದೈಹಿಕ ಶಿಕ್ಷಣ ನಿರ್ದೇಶಕ ಪ್ರೊಫೆಸರ್ ವೆಂಕಟೇಶ, ಪ್ರದೇಶ ಸಮಾಚಾರಕ್ಕಾಗಿ, ಹೆಚ್ಚಿನ ಮಾಹಿತಿ ನೀಡಿದ್ದಾರೆ.

<><><>

ಪ್ರೊ. ವೆಂಕಟೇಶ ಧ್ವನಿ 37 ಸೆಕೆಂದುಗಳು
ಹರ್ಷ/ಟಿಟಿಸಿ ದಾವಣಗೆರೆ (36)

<><><>

ರಾಜ್ಯದಲ್ಲಿ ಮಳೆಯ ಅಬ್ಬರ ಮುಂದುವರಿದಿದ್ದು, ಒಟ್ಟು 9 ಜಿಲ್ಲೆಗಳ ವ್ಯಾಪ್ತಿಯಲ್ಲಿ ರಭಸದ ಮಳೆಯಾಗಿದೆ.

<><><>

ಕಲಬುರಗಿ ಜಿಲ್ಲೆ, ಚಿಂಚೋಳಿ ತಾಲೂಕಿನ, ಶಾದಿಪುರ ಗ್ರಾಮದ, ಧನಸಿಂಗ್ ನಾಯಕ ತಾಂಡಾದ, 22 ವರ್ಷದ ಯುವಕ, ಮಹೇಶ ಕಿಶನ ಚೌವ್ಹಾಣ, ಸಿಡಿಲು ಬಡಿದು ಮೃತಪಟ್ಟಿದ್ದಾರೆ.

<><><>

ಧಾರವಾಡದ, ಉಪನಗರ ಪೊಲೀಸ್ ಠಾಣೆ ಎದುರು, ಮರಗಳು ಉರುಳಿಬಿದ್ದ ಪರಿಣಾಮ, ವಾಹನಗಳಿಗೆ ಧಕ್ಕೆಯಾಗಿದೆ.

<><><>

ಗದಗ ಜಿಲ್ಲೆಯ, ನರಗುಂದ, ಡಂಬಳ, ಮುಳಗುಂದ, ಮುಂಡರಗಿ ತಾಲೂಕಿನಲ್ಲಿ ಭಾರೀ ಮಳೆಯಾಗಿದ್ದು, ದಿಂಡೂರು ತಾಂಡಾದಲ್ಲಿ, ಮೂರು ಮನೆಗಳ ಮೇಲ್ಛಾವಣಿ ಹಾರಿಹೋಗಿವೆ.

<><><>

ಶಿವಮೊಗ್ಗ ಜಿಲ್ಲೆ, ರಿಪ್ಪನ್‌ಪೇಟೆ ಸಮೀಪ, ಬಾಳೂರಿನಲ್ಲಿ ಚಲಿಸುತ್ತಿದ್ದ ಬೈಕ್ ಮೇಲೆ, ಏಕಾಏಕಿ ಮರ ಉರುಳಿಬಿದ್ದು, ನೇರಲೆ ಗ್ರಾಮದ, 53 ವರ್ಷದ ಚಂದ್ರಶೇಖರ ಗಾಯಗೊಂಡಿದ್ದಾರೆ.

<><><>

ವಿಜಯಪುರ ಜಿಲ್ಲೆ, ತಿಕೋಟಾದಲ್ಲಿ, ಬಿರುಗಾಳಿ ಸಹಿತ, ಆಲಿಕಲ್ಲು ಮಳೆಯಾಗಿದ್ದು, ಲಕ್ಷಾಂತರ ರೂಪಾಯಿ ಮೌಲ್ಯದ, ದ್ರಾಕ್ಷಿ ಬೆಳೆ ಹಾನಿಗೀಡಾಗಿದೆ.

<><><>

ಹಾವೇರಿ ಜಿಲ್ಲೆ, ಬ್ಯಾಡಗಿ ತಾಲೂಕು, ಮಾಸಣಗಿ ಗ್ರಾಮದ ಸುತ್ತಮುತ್ತ, ದೊಡ್ಡ ಗಾತ್ರದ, ಮಂಜಿನ ಗಡ್ಡೆಗಳು ಅಲ್ಲಲ್ಲಿ ಕೃಷಿ ಭೂಮಿಯಲ್ಲಿ ಬಿದ್ದಿದ್ದು, ವಿದ್ಯುತ್ ಸಂಪರ್ಕ ಕಡಿತಗೊಂಡಿದೆ.

<><><>

ಏಪ್ರಿಲ್ 9 ರಂದು ನಡೆಯಲಿರುವ, ಬಾಗಲಕೋಟೆ ಹಾಗೂ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಯ ನಾಮಪತ್ರಗಳ ಪರಿಶೀಲನೆ ಕಾರ್ಯ, ಮಂಗಳವಾರ ಮುಕ್ತಾಯಗೊಂಡಿದ್ದು, ಅಭ್ಯರ್ಥಿಗಳು ತಮ್ಮ ನಾಮಪತ್ರ ವಾಪಸ್ ಪಡೆಯಲು, ಇಂದು ಕೊನೆಯ ದಿನ.

<><><>

ಎರಡೂ ಕ್ಷೇತ್ರಗಳಲ್ಲಿ, ಕಾಂಗ್ರೆಸ್ ಪಕ್ಷದಿಂದ, ಬಂಡಾಯ ಅಭ್ಯರ್ಥಿಗಳು ಕಣಕ್ಕಿಳಿದಿದ್ದಾರೆ. ಬಿಜೆಪಿ ಹಾಗೂ ಕಾಂಗ್ರೆಸ್ ಅಭ್ಯರ್ಥಿಗಳು, ಬಿರುಸಿನ ಪ್ರಚಾರ ಕೈಗೊಂಡಿದ್ದಾರೆ. ಬಾಗಲಕೋಟೆ ವಿಧಾನಸಭಾ ಕ್ಷೇತ್ರದಲ್ಲಿ, ಕಾಂಗ್ರೆಸ್ ನಿಂದ ಉಮೇಶ ಮೇಟಿ ಹಾಗೂ ಬಿಜೆಪಿಯಿಂದ ವೀರಣ್ಣ ಚರಂತಿಮಠ, ಮನೆ ಮನೆಗೆ ತೆರಳಿ ಮತಯಾಚಿಸಿದರು.

<><><>

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ, ಕಾಂಗ್ರೆಸ್ ಅಭ್ಯರ್ಥಿ ಸಮರ್ಥ ಶಾಮನೂರು ಹಾಗೂ ಬಿಜೆಪಿ ಅಭ್ಯರ್ಥಿ ಶ್ರೀನಿವಾಸ ದಾಸಕರಿಯಪ್ಪ, ಮತ ಯಾಚಿಸಿದರು.

<><><>

ಧಾರವಾಡ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ, ಯೋಗೇಶ ಗೌಡ ಕೊಲೆ ಪ್ರಕರಣಕ್ಕೆ ಸಂಬಂಧಿಸಿ, ವಿಚಾರಣೆ ಪೂರ್ಣಗೊಳಿಸಿರುವ, ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ, ಏಪ್ರಿಲ್ 2 ರಂದು, ತೀರ್ಪು ನೀಡುವುದಾಗಿ ತಿಳಿಸಿದೆ. ಈ ಪ್ರಕರಣದಲ್ಲಿ, ಧಾರವಾಡ ಗ್ರಾಮೀಣ ವಿಧಾನಸಭಾ ಕ್ಷೇತ್ರದ ಶಾಸಕ, ವಿನಯ ಕುಲಕರ್ಣಿ, 15ನೇ ಆರೋಪಿಯಾಗಿದ್ದಾರೆ. 2019 ರಲ್ಲಿ, ಅಂದಿನ ರಾಜ್ಯ ಸರ್ಕಾರ, ಈ ಪ್ರಕರಣವನ್ನು ಸಿ.ಬಿ.ಐ.ಗೆ, ವರ್ಗಾಯಿಸಿತ್ತು.

<><><>

ಉತ್ತರಕನ್ನಡ ಜಿಲ್ಲೆ, ಸಿದ್ದಾಪುರ ತಾಲೂಕು, ಹಳ್ಳಿಬೈಲ್‌ನ 48 ವರ್ಷದ ಪುರುಷರೋರ್ವರಿಗೆ, ಕ್ಯಾಸನೂರು ಮಂಗನ ಕಾಯಿಲೆ – ಕೆ.ಎಫ್.ಡಿ. ತಗುಲಿರುವುದು ಪತ್ತೆಯಾಗಿದೆ. ಅವರ ಆರೋಗ್ಯ ಸ್ಥಿರವಾಗಿದ್ದು, ಶಿರಸಿಯ ಪಿ.ಜಿ. ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು, ವರದಿ ತಿಳಿಸಿದೆ.

<><><>

ಗದಗ, ಕೆ.ಎಲ್.ಇ. ಸಂಸ್ಥೆಯ, ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದ, ಎನ್.ಎಸ್.ಎಸ್. ಘಟಕ, ಬೇಸಿಗೆಯಲ್ಲಿ ಪಕ್ಷಿಗಳ ರಕ್ಷಣೆಗೆ, ಕುಡಿಯುವ ನೀರು ಹಾಗೂ ಕಾಳುಗಳನ್ನು ವ್ಯವಸ್ಥೆಗೊಳಿಸಿದೆ. ಎನ್.ಎಸ್.ಎಸ್. ಸ್ವಯಂಸೇವಕರು, ತಮ್ಮ ಮಹಾವಿದ್ಯಾಲಯ ಹಾಗೂ ಸುತ್ತಲಿನ ಬಡಾವಣೆಗಳಲ್ಲಿ, ಪಕ್ಷಿಗಳಿಗೆ ಸಮುದಾಯದ ಆಸರೆಗಾಗಿ, ಜನ ಜಾಗೃತಿ ಮೂಡಿಸಿದರು.

<><><>

ಶಿವಮೊಗ್ಗ ವನ್ಯಜೀವಿ ವಿಭಾಗದ, ಸಕ್ರೆಬೈಲು ವನ್ಯಜೀವಿ ವಲಯದ, ಆನೆ ಬಿಡಾರದಲ್ಲಿ, 24 ಆನೆಗಳ ಪಾಲನೆ–ಪೋ ’ಣೆ ಕೈಗೊಳ್ಳಲಾಗುತ್ತಿದೆ. ಬಿಡಾರದಲ್ಲಿ 18 ಗಂಡು, 3 ಹೆಣ್ಣು ಮತ್ತು 3 ಮರಿ ಆನೆಗಳಿವೆ. ಆನೆಗಳ ಸಮಗ್ರ ಆರೈಕೆ, ನಿರ್ವಹಣೆ ಬಗ್ಗೆ, ಅಗತ್ಯ ಕ್ರಮಗಳ ಶಿಫಾರಸಿಗೆ, ದುಬಾರೆ ಆನೆ ಶಿಬಿರದ, ನಿವೃತ್ತ ಉಪ ನಿರ್ದೇಶಕ, ಡಾಕ್ಟರ್ ಎಲ್. ಚಟಿಯಪ್ಪ, ನೇತೃತ್ವದ ಐವರು ಪಶುವೈದ್ಯರ ಸಮಿತಿ, ರಚಿಸಲಾಗಿದೆ ಎಂದು, ಪ್ರಕಟಣೆ ತಿಳಿಸಿದೆ.

<><><>

ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲೂಕು, ಚೆನ್ನಮಲ್ಲಿಪುರ ಗ್ರಾಮದ ಬಾಳೆತೋಟ ಹಾಗೂ ಆಸುಪಾಸಿನಲ್ಲಿ, ಮರಿಯೊಟ್ಟಿಗೆ ತಾಯಿ ಹುಲಿ ಬೀಡು ಬಿಟ್ಟಿದೆ.

ಅರಣ್ಯ ಇಲಾಖೆಯ, ಮದ್ದೂರು ಮತ್ತು ಮೂಲೆಹೊಳೆ ಸಿಬ್ಬಂದಿ, ಹುಲಿಗಳ ಚಲನವಲನದ ಮೇಲೆ, ಡ್ರೋನ್ ಕ್ಯಾಮೆರಾ ಬಳಸಿ, ನಿಗಾ ವಹಿಸಿದ್ದಾರೆ.

<><><>